

ಭಾರತದಲ್ಲಿ ಬೆಳೆಯುವ ಶೇಕಡಾ 85ರಷ್ಟು ಸ್ಟ್ರಾಬೆರಿ ಹಣ್ಣುಗಳು ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿಯೇ ಬೆಳೆಯುತ್ತವೆ. ಮಹಾಬಲೇಶ್ವರವನ್ನು ಸ್ಟ್ರಾಬೆರಿ ರಾಜಧಾನಿ ಎಂದರೂ ಸರಿಯೇ. ಆಕರ್ಷಕ, ವಿಶೇಷ ಸುವಾಸನೆ ಮತ್ತು ಗಾಢವಾದ ಕೆಂಪು ವರ್ಣದ ಸ್ಟ್ರಾಬೆರಿ ಹಣ್ಣುಗಳು ಆರೋಗ್ಯದಾಯಕವೂ ಹೌದು. ಫುಗೇರಿಯಾ ವರ್ಗಕ್ಕೆ ಸೇರಿದ ಸ್ಟ್ರಾಬೆರಿ ಸಾಮಾನ್ಯ ಸಸ್ಯಗಳಲ್ಲಿ ಬೆಳೆಯುತ್ತವೆ.

ಮಹಾಬಲೇಶ್ವರಕ್ಕೂ ದೂರದ ಆಸ್ಟ್ರೇಲಿಯಾಕ್ಕೂ ಈ ಸ್ಟ್ರಾಬೆರಿಯದ್ದೇ ನಂಟು. ಆಸ್ಟ್ರೇಲಿಯಾದಿಂದ ಬ್ರಿಟಿಷರ ಕಾಲದಲ್ಲಿ ಮಹಾಬಲೇಶ್ವರಕ್ಕೆ ಈ ಹಣ್ಣುಗಳು ಬಂದವು. ಅಂದಿನಿಂದಲೂ ಇಲ್ಲಿಯ ರೈತರು ತಮ್ಮದೇ ಆದ ವೈವಿಧ್ಯಮಯ ತಳಿಗಳ ಸ್ಟ್ರಾಬೆರಿ ಹಣ್ಣುಗಳನ್ನು ಬೆಳೆಯಲಾರಂಭಿಸಿದರು. ಸುಮಾರು 300 ಎಕರೆ ಪ್ರದೇಶದಲ್ಲಿ 30,000 ಮೆಟ್ರಿಕ್ ಟನ್ ನಷ್ಟು ಸ್ಟ್ರಾಬೆರಿ ಹಣ್ಣುಗಳನ್ನು ಪ್ರತೀ ವರ್ಷ ಇಲ್ಲಿನ ರೈತರು ಬೆಳೆಯುತ್ತಾರೆ.

ಮಹಾಬಲೇಶ್ವರದ ತಂಪಾದ ಹವಾಮಾನ ಮತ್ತು ಕೆಂಪು ಮಣ್ಣು ಈ ಹಣ್ಣುಗಳನ್ನು ಬೆಳೆಯಲು ಸೂಕ್ತವಾಗಿದೆ. ಇಲ್ಲಿಯ ರೈತರು ಪರಿಶ್ರಮಿಗಳು. ಸೆಗಣಿ, ಮಣ್ಣು ಮತ್ತು ಮರಳು ಇವುಗಳನ್ನು ಮಿಶ್ರಮಾಡಿ ಅದನ್ನು ಪ್ಲಾಸ್ಟಿಕ್ ಶೀಟ್‌ಗಳಿಂದ ಮುಚ್ಚುತ್ತಾರೆ. ನಂತರ ಈ ಶೀಟ್ ಗಳಲ್ಲಿ ಚಿಕ್ಕ ಚಿಕ್ಕ ರಂಧ್ರಗಳನ್ನು ಮಾಡಿ ಬೀಜ ಅಥವಾ ಚಿಕ್ಕ ಸಸ್ಯಗಳನ್ನು ನೆಡುತ್ತಾರೆ. ಸಸ್ಯದ ಅಡಿಯಲ್ಲಿ ಕೊಳವೆಯ ಮೂಲಕ ನೀರು ಹರಿಸಲಾಗುತ್ತದೆ. ಒಂದೆರಡು ವರ್ಷ ಚೆನ್ನಾಗಿ ಫಸಲು ನೀಡುತ್ತವೆ. ಮತ್ತೆ ಹೊಸ ಗಿಡಗಳನ್ನು ನೆಡುತ್ತಾರೆ.

ಈ ಗಿಡಗಳನ್ನು ಅದಕ್ಕಾಗಿಯೇ ತಯಾರಿಸಿದ ವಿಶೇಷ ಕುಂಡಗಳಲ್ಲಿಯೂ ಬೆಳೆಸಬಹುದು. ವರ್ಷಪೂರ್ತಿ ಬೆಳೆದರೂ ಡಿಸೆಂಬರ್‌ನಿಂದ ಏಪ್ರಿಲ್‌ವರೆಗೆ ಹಣ್ಣುಗಳ ಸುಗ್ಗಿಯಾಗಿರುತ್ತದೆ.

ಮಹಾಬಲೇಶ್ವರದ ಈ ಹಣ್ಣುಗಳು ಭಾರತದ ವಿವಿಧ ರಾಜ್ಯಗಳಿಗೆ ಮಾತ್ರವಲ್ಲ, ವಿದೇಶಗಳಿಗೂ ರವಾನೆಯಾಗುತ್ತವೆ. ಮುಖ್ಯವಾಗಿ ಫ್ರಾನ್ಸ್, ಬೆಲ್ಜಿಯಂ, ಮಲೇಷ್ಯಾಗಳಿಗೆ ಸ್ಟ್ರಾಬೆರಿ ಹಣ್ಣುಗಳು ಇಲ್ಲಿಂದ ರಫ್ತಾಗುತ್ತವೆ.

# ಮಹಾಬಲೇಶ್ವರದ ಸ್ಟ್ರಾಬೆರಿ

ಜನಪ್ರಿಯ ಗಿರಿಧಾಮವಾಗಿರುವ ಮಹಾಬಲೇಶ್ವರದಲ್ಲಿ ಪ್ರವಾಸೋದ್ಯಮ ಬೆಳೆಯಲು ಈಗ ಸ್ಟ್ರಾಬೆರಿ ಹೊಲಗಳೂ ಕೊಡುಗೆ ನೀಡುತ್ತಿವೆ.

★ ಚಿತ್ರ- ಲೇಖನ: ವಾರಿಜಾ ಜಗದೀಶ್



